**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ** 10006/2023

ಪಿಡಬ್ಲೂ- 1

ಸಿಡಬ್ಲೂ-1

| | |
|---|---|
| ಸಾಕ್ಷಿ ಹೆಸರು | - ಮಾಲತೇಶ |
| ತಂದೆ ಹೆಸರು | - ಲೋಕೇಶ ವೈ ಡಿ |
| ವಯಸ್ಸು | - 32 ವರ್ಷ |
| ಉದ್ಯೋಗ | - ಖಾಸಗಿ ಉದ್ಯೋಗ |
| ವಾಸಃ | - ಯಲಸಿ , ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 07-03-2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ2 ನನ್ನ ತಾಯಿ, ಚಾಸಾ3 ನನ್ನ ತಾಯಿ, ಚಾಸಾ4 ನನ್ನ ತಮ್ಮ, ಚಾಸಾ 5 ನಮ್ಮ ಪಕ್ಕದ ಮನೆಯವರು , ಚಾಸಾ6 ನನ್ನ ಚಿಕ್ಕಪ್ಪ . ಆರೋಪಿತರು ನಮ್ಮ ಪಕ್ಕದ ಮನೆಯವರಾಗಿದ್ದು ನನಗೆ ಪರಿಚಯ ಇರುತ್ತಾರೆ. ನಮ್ಮ ಮನೆಯವರಿಗೆ ಮತ್ತು ಆರೋಪಿತರ ಮನೆಯವರಿಗೆ ಜಾಗದ ವಿಚಾರದಲ್ಲಿ ವೈಮನಸ್ಸು ಇದೆ. ದಿನಾಂಕಃ 06-03-2022 ರಂದು ಸಂಜೆ ಸುಮಾರು 5 ಗಂಟೆ ಸಮಯದಲ್ಲಿ ನಮ್ಮ ಮನೆಯವರೆಲ್ಲರೂ ಅವರವರ ಕೆಲಸದಲ್ಲಿ ತೊಡಗಿಕೊಂಡಿದ್ದು ಚಾಸಾ3 ರವರು ಮನೆಯ ಹಿಂಭಾಗ ಸಗಣಿ ಸಾರಿಸುತ್ತಿದ್ದರು, ಆಗ 1 ನೇ ಆರೋಪಿಯು ಅಲ್ಲಿಗೆ ಬಂದು ಇದು ನಮ್ಮ ಜಾಗ ಇಲ್ಲಿ ಯಾಕೆ ಸಗಣಿ ಸಾರಿಸುತ್ತಿದ್ದೀಯಾ, ಸೂಳೆ ಮುಂಡೆ , ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಚಾಸಾ3 ರವರಿಗೆ ಬೈದನು. ಬೈದದ್ದನ್ನು ಕೇಳಿಸಿಕೊಂಡು ನಾನು ಅಲ್ಲಿಗೆ ಬಂದು

ಯಾಕೆ ಚಸಾ3 ರವರನ್ನು ಬೈಯ್ಯುತ್ತಿದ್ದಿಯಾ ಎಂದು ಕೇಳಿದಾಗ 1 ನೇ ಆರೋಪಿಯು ನೀನು ಯಾವನೋ ಕೇಳುವುದಕ್ಕೆ ಎಂದು ಬಂದು ಕೈಯಿಂದ ನನ್ನ ಮೈಮೇಲೆ ಹೊಡೆದಿರುತ್ತಾನೆ. ಆಗ ಚಾಸಾ2 ರವರು ಜಗಳವನ್ನು ಬಿಡಿಸಲು ಬಂದಿದ್ದು ಆಗ 1 ನೇ ಆರೋಪಿಯ ತಂದೆ 2 ನೇ ಆರೋಪಿ ಬಂದು ನಮ್ಮನ್ನು ದೂಡಿ ಕೆಡವಿ 2 ನೇ ಆರೋಪಿಯು ನನ್ನ ತಂದೆಗೆ ಕೈಯಿಂದ ಹೊಡೆದಿರುತ್ತಾನೆ. ಅದಾದನಂತರ 1 ನೇ ಆರೋಪಿಯು ಅಲ್ಲೇ ಪಕ್ಕದಲ್ಲಿ ಇದ್ದ ಕಂದಿಲಿಯನ್ನು ತೆಗೆದುಕೊಂಡು ನನ್ನ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾನೆ. ಆಗ ನನ್ನ ತಲೆಯ ಎಡಭಾಗ ಓಪನ್ ಆಗಿರುತ್ತದೆ.

ಆಗ ಚಾಸಾ2 ರವರು ನನ್ನನ್ನು ಬಿಡಿಸಲು ಬಂದಿದ್ದು ಆಗ 1 ನೇ ಆರೋಪಿ ಚಾಸಾ2 ರವರ ಕುತ್ತಿಗೆಯ ಎಡಭಾಗ ಮತ್ತು ಭುಜಕ್ಕೆ ಅದೇ ಕಂದ್ಲಿಯಿಂದ ಹಲ್ಲೆ ಮಾಡಿರುತ್ತಾನೆ. ಆಗ ನನಗೆ ಹೊಡೆತ ಬಿದ್ದಿದ್ದರಿಂದ ನಾನು ಸುಮ್ಮನೆ ಇದ್ದೆನು. ಆಗ ಚಾಸಾ3 , ಪ್ರಾಸಾ5 ಮತ್ತು ಪ್ರಾಸಾ6 ರವರು ಬಂದು ಜಗಳ ಬಿಡಿಸಿದರು. ನಂತರ 1 ನೇ ಆರೋಪಿ ಕಂದ್ಲಿಯನ್ನು ಅಲ್ಲಿಯೇ ಬಿಸಾಡಿ ನಿಮ್ಮನ್ನು ಸಾಯಿಸಿ ಬಿಡುತ್ತಿದ್ದೆ ಆದರೆ ಆಗಲಿಲ್ಲ ಮುಂದೊಂದು ದಿನ ನಿಮ್ಮನ್ನು ಸಾಯಿಸುವುದಾಗಿ ಬೆದರಿಕೆ ಹಾಕಿ ಹೋಗಿರುತ್ತಾರೆ.

ನಂತರ ಗಾಯಗೊಂಡ ನನ್ನನ್ನು ಮತ್ತು ನನ್ನ ತಂದೆಯವರನ್ನು ಚಾಸಾ4 ರಿಂದ ಚಾಸಾ6 ರವರು ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿರುತ್ತಾರೆ. ಸೊರಬ ಸರ್ಕಾರಿ ಆಸ್ಪತ್ರೆಗೆ ಸೊರಬ ಪೋಲೀಸರು ಬಂದಿದ್ದು ಅವರು ನನ್ನನ್ನು ವಿಚಾರ ಮಾಡಿ ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ಅವರು ಬರೆದುಕೊಂಡಿದ್ದನ್ನು ಓದಿ ಹೇಳಿದ್ದು ನಂತರ ನಾನು ಸದರಿ ಹೇಳಿಕೆಗೆ ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ:14-03-2022 ರಂದು ನಾನು ಸೊರಬ ಪೋಲೀಸ್ ಠಾಣೆಗೆ ಹೋಗಿ ಕೃತ್ಯ ನಡೆದ ಸಮಯದಲ್ಲಿ ನಾನು ಧರಿಸಿದ್ದ ಟೋಪಿ, ತುಂಬು ತೋಳಿನ ಶರ್ಟ್ ಮತ್ತು ಚಾಸಾ2 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಅರ್ಧ ತೋಳಿನ ಶರ್ಟ್ ರಕ್ತಸಿಕ್ತವಾಗಿದ್ದು ಅವುಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಪೋಲೀಸರು ಪಂಚರಾದ ಚೇತನ್ ಕುಮಾರ್ ಬಿ , ದಯಾನಂದ ಮತ್ತು ಚಾಸಾ2 ರವರನ್ನು ಠಾಣೆಗೆ ಕರೆಸಿ ಅವರಿಗೆ ನೋಟೀಸ್ ಕೊಟ್ಟಿರುತ್ತಾರೆ. ಸದರಿ ನೋಟೀಸಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ನೋಟೀಸ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ನಂತರ ನನಗೆ ಸಂಬಂಧಪಟ್ಟ ತುಂಬು ತೋಳಿನ ಶರ್ಟ್‌ನ್ನು ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ.

ವಶಪಡಿಸಿಕೊಂಡಂತಹ ವಸ್ತುಗಳನ್ನು ಪೊಲೀಸರು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಿ ಫೋಟೋಗಳನ್ನು ತೆಗೆದಿರುತ್ತಾರೆ. ಈ ಬಗ್ಗೆ ಮದ್ಯಾಹ್ನ 2 ರಿಂದ 3 ಗಂಟೆ ವರೆಗೆ ಮಹಜರ್ ಮಾಡಿರುತ್ತಾರೆ. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದು ಸದರಿ ದಾಖಲೆ ಅಮಾನತ್ತು ಪಂಚನಾಮೆ ಅಗಿದ್ದು ಅದನ್ನು ನಿಪಿ3 ಎಂದು ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ನಿಪಿ 3 ಕ್ಕೆ ಚೇತನ್ ಕುಮಾರ್ ಬಿ ಮತ್ತು ದಯಾನಂದ ಮತ್ತು ಚಾಸಾ2 ರವರು ಸಹಿ ಮಾಡಿರುತ್ತಾರೆ. ನಿಪಿ3 ರ ಸಮಯದಲ್ಲಿ ಪೋಲೀಸರು ಫೋಟೋ ತೆಗೆದಿದ್ದು ಅದನ್ನು ನಿಪಿ4 ಎಂದು ಗುರುತಿಸಲಾಯಿತು . ನಂತರ ನನ್ನ ಮರು ಹೇಳಿಕೆಯನ್ನು ಪಡೆದಿರುತ್ತಾರೆ. ಆರೋಪಿತರು ನನ್ನನ್ನು ಕೊಲೆ ಮಾಡಿ ಸಾಯಿಸುವ ಉದ್ದೇಶದಿಂದ ಕತ್ತಿಯಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ. ನನ್ನ ಮತ್ತು ನನ್ನ ತಂದೆಯ ರಕ್ತದ ಗುಂಪನ್ನು ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿರುತ್ತೇವೆ. ಘಟನೆ ಸಮಯದಲ್ಲಿ ನಾನು ಮತ್ತು ನನ್ನ ತಂದೆ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತುಗಳನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಸೀಲುಗಳನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತುಗಳ ಸೀಲ್ ಬಿಚ್ಚಿ ತೆರೆಯಲಾಯಿತು)

ಟೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ1 ಎಂದು, ತುಂಬು ತೋಳಿನ ಶರ್ಟ್‌ನ್ನು ಮು ಮಾ 2 ಎಂದು ಅರ್ಧ ತೋಳಿನ ಆಕಾಶ ನೀಲಿ ಬಣ್ಣದ ಶರ್ಟ್‌ನ್ನು ಮು ಮಾ 3 ಎಂದು ಗುರುತಿಸಲಾಯಿತು . ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ್ದ ಕಂದ್ಲಿಯನ್ನು ನೋಡಿದರೆ ಗುರುತಿಸುತ್ತೇನೆ. ಕಂದ್ಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ 4 ಎಂದು ಗುರುತಿಸಲಾಯಿತು. ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಿ ಪ್ರಕರಣವನ್ನು ಪಾಟೀಸವಾಲಿಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).